# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 732 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 26-12-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಸ್ಕಾಂಗಳಲ್ಲಿ ಆರ್-ಎಪಿಡಿಆರ್‌ಪಿ ಅಳವಡಿಸಲಾಗಿದೆಯೇ; | ರಾಜ್ಯದ ಎಲ್ಲಾ ಎಸ್ಕಾಂಗಳ ಆಯ್ದ 98 ಪಟ್ಟಣಗಳಲ್ಲಿ ಆರ್-ಎ.ಪಿ.ಡಿ.ಆರ್.ಪಿ ತಂತ್ರಾಂಶವನ್ನು ಅಳವಡಿಸಲಾಗಿದೆ. |
| ಆ) | ಈ ಪೋರ್ಟಲ್‌ನ್ನು ನಿರ್ವಹಿಸಲು ಯಾವ ಸಂಸ್ಥೆಗೆ ನೀಡಲಾಗಿದೆ; (ವಿವರ ನೀಡುವುದು) | ಕಳೆದ 12 ವರ್ಷಗಳಿಂದ M/s. Infosys ಲಿಮಿಟೆಡ್ ಸಂಸ್ಥೆಯು ಆರ್-ಎ.ಪಿ.ಡಿ.ಆರ್.ಪಿ ತಂತ್ರಾಂಶದ ನಿರ್ವಹಣೆಯನ್ನು ಮಾಡುತ್ತಿದ್ದು, ಕಾಲಾವಧಿಯ ಮುಕ್ತಾಯದ ಕಾರಣ ದಿನಾಂಕ: 31.05.2022 ರಿಂದ ಸದರಿ ಪೋರ್ಟಲ್‌ನ ನಿರ್ವಹಣೆಯಿಂದ ಹಿಂದೆ ಸರಿದಿರುತ್ತದೆ. ಮುಂದಿನ ಅವಧಿಗೆ, ಟೆಂಡರ್ ಪ್ರಕ್ರಿಯೆ ಮುಖಾಂತರ M/s. Infosys Computer Solution India Limited ಸಂಸ್ಥೆಗೆ ಪೋರ್ಟಲ್‌ನ ನಿರ್ವಹಣೆಯ ಗುತ್ತಿಗೆಯನ್ನು ನೀಡಲಾಗಿದೆ. |
| ಇ) | ಈ ಪೋರ್ಟಲ್ ವ್ಯವಸ್ಥೆಯಿಂದ ಹೊಸದಾದ ವಿದ್ಯುತ್ ಸಂಪರ್ಕ, ಖಾತೆ ಬದಲಾವಣೆ, ಇತ್ಯಾದಿ ಕಡತಗಳು ವಿಳಂಬವಾಗಿ ಜನರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಜುಲೈ 2022 ರಲ್ಲಿ ಆರ್-ಎ.ಪಿ.ಡಿ.ಆರ್.ಪಿ ಹಾರ್ಡ್‌ವೇರ್‌ನಲ್ಲಿ ಕಂಡು ಬಂದ ದೋಷದಿಂದಾಗಿ ಆಗಸ್ಟ್ 2022 ಮತ್ತು ಸೆಪ್ಟೆಂಬರ್ 2022 ತಿಂಗಳಲ್ಲಿ ಆರ್-ಎ.ಪಿ.ಡಿ.ಆರ್.ಪಿ ತಂತ್ರಾಂಶ ನಿರ್ವಹಣೆಯಲ್ಲಿ ಅಡಚಣೆ ಉಂಟಾಗಿರುತ್ತದೆ. ಆ ಸಂದರ್ಭದಲ್ಲಿ ಗ್ರಾಹಕರು ವೆಬ್ ಪೋರ್ಟಲ್‌ಗೆ ಲಾಗಿನ್ ಆಗಲು ಬೆಸ್ಕಾಂ ಹಾಗೂ ಇತರೆ ಎಸ್ಕಾಂಗಳಿಗೆ ಪ್ರತ್ಯೇಕ ಸಮಯವನ್ನು ನಿಗದಿಪಡಿಸಲಾಗಿತ್ತು. ಇದೀಗ ಕೆಲವು ಹೆಚ್ಚುವರಿ ಸರ್ವರ್‌ಗಳು ಹಾಗು ತಂತ್ರಾಂಶಗಳ ಉನ್ನತೀಕರಣದಿಂದಾಗಿ, ಆರ್-ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಲಾಗಿದ್ದು, ಎಲ್ಲಾ ಎಸ್ಕಾಂಗಳ ಗ್ರಾಹಕರಿಗೆ ಹೊಸ ವಿದ್ಯುತ್ ಸಂಪರ್ಕ, ಖಾತೆ ಬದಲಾವಣೆ, ಜನಸ್ನೇಹಿ ವಿದ್ಯುತ್ ಸೇವೆಗಳನ್ನೊಳಗೊಂಡಂತೆ ಹಲವು ವಿದ್ಯುತ್ ಸೇವೆಗಳನ್ನು 24 ಗಂಟೆಗಳ ಕಾಲ ನಿರಂತರವಾಗಿ ಒದಗಿಸಲಾಗುತ್ತಿದೆ.<br>ಆರ್-ಎ.ಪಿ.ಡಿ.ಆರ್.ಪಿ ಯೋಜನೆಯಡಿ ಅಳವಡಿಸಲಾಗಿರುವ ತಂತ್ರಾಂಶವು ಸುಮಾರು 12 ವರ್ಷ ಹಳೆಯದಾಗಿರುವುದರಿಂದ ಗ್ರಾಹಕರು ಸರ್ವರ್‌ಗೆ ಒಮ್ಮೆಲೇ ಲಾಗಿನ್ ಆದ ಸಂದರ್ಭದಲ್ಲಿ ಮಾತ್ರ ಅಡಚಣೆ ಉಂಟಾಗುತ್ತಿದೆ. ಸದ್ಯ ಕಾರ್ಯ ನಿರ್ವಹಿಸುತ್ತಿರುವ ತಂತ್ರಾಂಶದ ಲೋಪದೋಷಗಳನ್ನು ಶಾಶ್ವತವಾಗಿ ಬಗೆಹರಿಸಲು ಹೊಸ ತಂತ್ರಾಂಶವನ್ನು ಸಿದ್ಧಪಡಿಸಲು M/s. Infosys Computer Solution India Limited ಸಂಸ್ಥೆಗೆ ಕಾರ್ಯಾದೇಶವನ್ನು ನೀಡಲಾಗಿದೆ. |
| ಈ) | ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | |

ಸಂಖ್ಯೆ: ಎನರ್ಜಿ 275 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು